ಈ) ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಆಡಿಯಲ್ಲಿ ಬೆಳೆಸಿರುವ ನೀಲಗಿರಿ ಮರಗಳು ಸರ್ಕಾರದ ಅಧೀನದಲ್ಲಿದೆಯೇ, ಅಥವಾ ಜಿಲ್ಲಾ ಪರಿಷತ್ ಅಧೀನದಲ್ಲಿದೆಯೆ, ಅಥವಾ ಮಂಡಲ್ ಪಂಚಾಯತ್ ಅಧೀನದಲ್ಲಿದೆಯೇ ?

ಉ) ಮೇಲೆ ತಿಳಿಸಿದ ನೀಲಗಿರಿ ಮರಗಳನ್ನು ಕಟಾವು ಮಾಡಿ ಮಾರಾಟ ಮಾಡಲು ತುಮಕೂರು ಜಿಲ್ಲಾ ಪರಿಷತ್‌ನಿಂದ ಯಾವುದಾದರೂ ಮನವಿ ಬಂದಿದೆಯೇ ?

ಊ) ಇದಕ್ಕೆ ಸರ್ಕಾರದ ಅನುಮತಿ ಇದೆಯೇ ?

ಋ) ಹಾಗಿದ್ದಲ್ಲಿ ಇದರಲ್ಲಿ ಬರುವ ಮಾರಾಟದ ಹೊಬಲಗಿನಲ್ಲಿ ಜಿಲ್ಲಾ ಪರಿಷತ್‌ಗೆ ಕೊಡುವ ಭಾಗವೆಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

ಅ) ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಬೆಳೆಸಿರುವ ನೀಲಗಿರಿ ನೆಡು ತೋಪುಗಳಲ್ಲಿ ಅಕ್ರಮ ಕಟಾವಣೆಯಾಗಿರುವದಿಲ್ಲ. ಆದರೆ, ಅರಣ್ಯೇತರ ಪ್ರದೇಶಗಳಲ್ಲಿ ಬೆಳೆಸಿರುವ ಅಲ್ಪಸ್ವಲ್ಪ ಮರಗಳ ಕಟಾವಣೆಯಾಗಿರುವುದು ಗಮನಕ್ಕೆ ಬಂದಿದೆ.

ಆ) ಸರ್ಕಾರದ ಗಮನಕ್ಕೆ ಬಂದ ಪ್ರಕರಣಗಳಲ್ಲಿ ಸೂಕ್ತ ಶಿಸ್ತು ಕ್ರಮ ತೆಗೆದುಕೊಂಡು ಮೊಕದ್ದಮೆ ದಾಖಲಾತಿ ಮಾಡಿಕೊಂಡು ಮುಂದಿನ ಕ್ರಮ ಕಾನೂನಿನ ಪ್ರಕಾರ ಜರುಗಿಸಲಾಗುತ್ತಿದೆ.

ಇ) ಸುಮಾರು ರೂ. 3.24 ಲಕ್ಷಗಳು.

ಈ) ಅರಣ್ಯ ಪ್ರದೇಶದಲ್ಲಿ ಬೆಳೆಸಿರುವ ನೆಡುತೋಪುಗಳು ಸರ್ಕಾರದ ಅಧೀನದಲ್ಲಿದೆ. ಅರಣ್ಯೇತರ ಪ್ರದೇಶದಲ್ಲಿ ಬೆಳೆಸಿದ ನೀಲಗಿರಿ ಮರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾ ಪರಿಷತ್, ತುಮಕೂರು ಇವರ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ಉ) ಹೌದು.

ಊ) ಇಲ್ಲ.

ಋ) ಪರಿಶೀಲನೆಯಲ್ಲಿದೆ.

ವಿಷಯ : ಜವಳಗೇರಾ ಸೆಂಟ್ರಲ್ ಸ್ಟೇಟ್ ಫಾರ್ಮ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 420 (707)

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ) :– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ಜಿಲ್ಲೆಯ ಸಿಂಧನೂರ ತಾಲ್ಲೂಕಿನ ಜವಳಗೇರಾ ಸೆಂಟ್ರಲ್ ಸ್ಟೇಟ್ ಫಾರ್ಮ್ ಸರ್ಕಾರ ವಶಪಡಿಸಿಕೊಳ್ಳುವದೆ ?

ಆ) ಈ ಫಾರ್ಮಿನ ಭೂಮಿಯನ್ನು ಕೆಲವು ರೈತರು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) –

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ವಿಷಯ :– ಬೇಲೂರು ತಾಲ್ಲೂಕಿನಲ್ಲಿ ತೋಡಲಾದ ಕೊಳವೆ ಬಾವಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 421 (665) :

ಶ್ರೀ ಬಿ. ಹೆಚ್. ಲಕ್ಷ್ಮಯ್ಯ (ಬೇಲೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೇಲೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತೋಡಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ? ಅವುಗಳಲ್ಲಿ ನೀರು ಬಾರದೇ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

ಆ) ಇನ್ನೂ ಎಷ್ಟು ಗ್ರಾಮಗಳಿಗೆ, ಹರಿಜನ ಕಾಲೋನಿಗಳಿಗೆ ಕೊಳವೆ ಬಾವಿ ತೋಡಿಸಬೇಕಾಗಿದೆ.

ಈಗ ಕೊಳವೆ ಬಾವಿಗಳನ್ನು ಕೋರಿ ಬಂದಿರುವ ಮನವಿಗಳ ಸಂಖ್ಯೆ ಎಷ್ಟು ?

ಇ) ಕಿರು ನೀರು ಯೋಜನೆ ಹಾಗೂ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರು ಯೋಜನೆಗಳನ್ನು ಕೋರಿ ಬಂದ ಮನವಿಗಳ ಸಂಖ್ಯೆ, ಅವುಗಳಲ್ಲಿ ಹಾಲಿ ಕಾರ್ಯಗತವಾಗಿರುವದೆಷ್ಟು ?